## ಹೀಗೆ ಸಂರಕ್ಷಿಸಿಡಿ...

- ಪಚ್ಚೆ ಹರಳಿನ ಒಡವೆಗಳನ್ನು ಜಾಗರೂಕತೆಯಿಂದ ಸಂಗ್ರಹಿಸಿಡಿ.
- ಒಮ್ಮೆ ಬಳಸಿದ ಮೇಲೆ ತಣ್ಣೀರಿನಲ್ಲಿ ತೊಳೆದು ಶುಭ್ರ ಬಟ್ಟೆಯಿಂದ ಒರೆಸಿ, ಒಣಗಿದ ಮೇಲೆ ಹತ್ತಿಯ ಬಟ್ಟೆಯಲ್ಲಿ ಅಥವಾ ಹತ್ತಿಯಲ್ಲೇ ಸುತ್ತಿ ಇಡಬಹುದು.
- ವೆಲ್ವೆಟ್ ಅಥವಾ ನುಣುಪಾದ ಬಟ್ಟೆಯಿಂದ ತಯಾರಿಸಿದ ಪೌಚ್‌ನಲ್ಲೂ ಇಟ್ಟುಕೊಳ್ಳಬಹುದು.
- ಆಭರಣವನ್ನು ತೆಗೆದು ಬಳಸುವ ಮುನ್ನ ಶುದ್ಧ ನೀರಿನಲ್ಲಿ ಕೈತೊಳೆಯುವುದು ಸೂಕ್ತ. ಇದರಿಂದ ದೂಳು, ಬೆವರು ಒಡವೆಗೆ ತಗಲುವ ಸಂಭವವಿಲ್ಲ.
- ಸೋಪು, ಸ್ಯಾನಿಟೈಸರ್‌ಗಳು ಹರಳಿನ ಒಡವೆಗೆ ತಾಗದಂತೆ ಕಾಪಾಡುವುದು ಅಗತ್ಯ.



### ಮರಕತ ಎಂಬ ಪಚ್ಚೆ ಹರಳು

ಎಮರಾಲ್ಡ್ ಅಥವಾ ಪಚ್ಚೆ ಹೆಸರೇ ಸೂಚಿಸುವಂತೆ ಇದು ಹಸುರು ಬಣ್ಣದಿಂದ ಕೂಡಿದೆ. ಇದನ್ನು ಮರಕತ ಎನ್ನುತ್ತಾರೆ. ಇದರಲ್ಲಿ ಗಾಢ ಪಚ್ಚೆ, ತಿಳಿ ಪಚ್ಚೆ ಬಣ್ಣದವೂ ಇವೆ. ಬೇರೆ ಬೇರೆ ಗಾತ್ರ ಆಕಾರಗಳಲ್ಲಿ ಪಚ್ಚೆ ಒಡವೆ ಲಭ್ಯವಿದೆ. ಇದು ನೈಸರ್ಗಿಕವಾಗಿ ದೊರೆಯುವಂತಹ ಹರಳು. ಇದರ ಒಳ ಮೇಲ್ಮೈಯಲ್ಲಿ ಗಾಳಿ ತುಂಬಿದ ಗುಳ್ಳೆ, ಗೀಚುಗಳು ಇಲ್ಲದೆ ಭದ್ರವಾಗಿ ಹೊಂದಿಕೊಂಡು ಇದ್ದಲ್ಲಿ ಉತ್ತಮ ಗುಣಮಟ್ಟದ್ದಾಗಿದೆ. ಬಣ್ಣ ಗಾತ್ರಕ್ಕೆ ಅನುಗುಣವಾಗಿ ಇದರ ಬೆಲೆಯೂ ನಿರ್ಧಾರವಾಗುತ್ತದೆ. ಹಿಂದಿನ ರಾಜಾಧಿರಾಜರ ಕಾಲದಿಂದಲೂ ಪಚ್ಚೆ ರತ್ನ ಆಭರಣಗಳಲ್ಲಿ ಬಳಕೆಯಲ್ಲಿದೆ. ಹಿಂದಿ ಭಾಷೆಯಲ್ಲಿ ಪನ್ನ, ಮರಕತ, ಹರಿತಮಣಿ ಎಂದು ಕರೆಯುತ್ತಾರೆ. ಪಚ್ಚೆ ರತ್ನ ಬುಧ ಗ್ರಹವನ್ನು ಸೂಚಿಸುತ್ತದೆ.

ಪಚ್ಚೆ ಬಣ್ಣಕ್ಕೆ ಚಿನ್ನ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಕೆಲವರದು ಒಂದು ಆತಂಕ. ಪಚ್ಚೆ ಬಣ್ಣದ ಆಭರಣ ಎಲ್ಲಾ ಡ್ರೆಸ್‌ಗಳಿಗೂ ಮ್ಯಾಚ್ ಆಗುತ್ತಾ? ಪಚ್ಚೆ ಹರಳಿನಿಂದ ಕೂಡಿದ ಒಡವೆ ಖರೀದಿಸಿದರೆ ಹೇಗೆ? ಎಂಬುದು. ಯಾವುದೇ ಉಡುಪು, ಒಡವೆಗಳನ್ನು ನಮ್ಮ ಅಭಿರುಚಿಗೆ ತಕ್ಕ ಹಾಗೆ ಮ್ಯಾಚ್ ಮಾಡುವುದು ನಮ್ಮ ಕೈಯಲ್ಲೇ ಇದೆ. ಯಾವುದೇ ಪ್ಲೈನ್ ದಿರಿಸಿಗೆ ಇದೂ ಅದ್ದೂರಿ ನೋಟ ಕೊಡುತ್ತದೆ. ಹಳದಿ, ಕೆಂಪು, ಮೆರೂನ್, ಬಿಳಿ, ಪಿಂಕ್ ಈ ತರದ ಯಾವುದೇ ಬಣ್ಣದ ಸೀರೆ ಡ್ರೆಸ್‌ನ ಪಕ್ಕ ಆಭರಣ ಇಟ್ಟು ನೋಡಿದರೂ ಬಹಳ ಸುಂದರವಾಗಿ ಕಾಣುತ್ತದೆ. ಹೊಸ ಲುಕ್ ಕೊಡುತ್ತದೆ. ನಮ್ಮನ್ನು ಗುಂಪಿನಲ್ಲಿ ಎದ್ದು ಕಾಣುವಂತೆ ಮಾಡುವ ನೋಟ ಎಮರಾಲ್ಡ್‌ಗೆ ಇದೆ.

ಆಭರಣದ ವಿನ್ಯಾಸವನ್ನು ಸ್ವಲ್ಪ ಯೋಚಿಸಿ ಆಯ್ಕೆ ಮಾಡಬೇಕು. ಚಿನ್ನದ ಬಣ್ಣ ಹೊಳಪು ಇದ್ದು ಪಚ್ಚೆಯೊಂದಿಗೆ ಬೆರೆತು ಒಳ್ಳೆಯ ಲುಕ್ ಕೊಡುತ್ತದೆ. ಯಾವ ಸೆಟ್ಟಿಂಗ್ ಆದರೂ ಹೊಂದಿಕೊಳ್ಳುತ್ತದೆ. ಚಿನ್ನದ ಬಣ್ಣ ಹರಳಿನಲ್ಲಿ ಕಾಣುವಂತೆ ಇರಬೇಕು. ಚಿನ್ನದ ಪ್ರಮಾಣ ಹರಳಿನ ಸುತ್ತಲೂ ಇರಬೇಕು.

ಪಚ್ಚೆ ಹರಳಿನ (ಎಮರಾಲ್ಡ್) ಆಭರಣ ನಿತ್ಯ ಧರಿಸುವ ಆಭರಣವಾಗಿ ಬಳಸಬಹುದೇ? ಎಂಬುದು ಅನೇಕ ಮಹಿಳೆಯರ ಅನುಮಾನ. ಸಂಶಯ ಖಂಡಿತ ಬೇಡ. ಏಕೆಂದರೆ ಇದು ಬೇಗನೆ ಹಾಳಾಗುವುದಿಲ್ಲ, ಗೀರುಗಳಾಗುವುದಿಲ್ಲ. ಉತ್ತಮ ಗುಣಮಟ್ಟದ, ಹೆಸರುವಾಸಿ ಬ್ರ್ಯಾಂಡ್ ಮಳಿಗೆಯಿಂದ ಖರೀದಿಸಿದ ಹರಳುಗಳಾಗಿದ್ದರೆ ಸರಿ.

ಪಚ್ಚೆ ಕಣ್ಣಿಗೆ ತಂಪು ಮನಸ್ಸಿಗೆ ಮುದ ನೀಡುವ ಬಣ್ಣ. ಪರಿಸರ ಹಸುರಾಗಿರಬೇಕು ಅಲ್ಲವೇ, ಹಾಗೆಯೇ ಹಸುರು ಬಣ್ಣಕ್ಕೆ ಅದರದ್ದೇ ಆದ



ಸ್ಥಾನವಿದೆ. ಎಮರಾಲ್ಡ್ ಹರಳಿನ ಬಣ್ಣ ಕಡು ಹಸುರು ಇದ್ದು ಆಕಾರ ದೊಡ್ಡದಾದಂತೆ ಅದರ ಮೌಲ್ಯ ಅಧಿಕವಾಗುತ್ತದೆ. ಬೇರೆ ಬೇರೆ ವಿಧದ ಒಡವೆಗಳನ್ನು ಖರೀದಿಸುವಾಗ ಜಾಗರೂಕತೆಯಿಂದ ಗಮನಿಸಿಯೇ ಖರೀದಿಸಬೇಕು. ಆಭರಣದಲ್ಲಿ ಹುದುಗಿದ ಹರಳು ಸುಂದರವಾಗಿ ಕಾಣುತ್ತದೆಯೇ ಎಂಬುದನ್ನು ಪರಿಶೀಲಿಸಬೇಕು. ಹೀಗೆ ಮಾಡಿದಲ್ಲಿ ವರ್ಷಾನುಗಟ್ಟಲೆ ಒಡವೆಯನ್ನು ಜತನವಾಗಿ ಕಾಪಿಡುತ್ತಾ, ಬೇಕೆಂದಾಗ ಬಳಸಿ ಮೆರೆಯಬಹುದು. ಅಲ್ಲದೆ ಎಮರಾಲ್ಡ್ ಒಡವೆ ಎಂದಿಗೂ ಔಟ್ ಆಫ್ ಫ್ಯಾಷನ್ ಆಗುವುದೇ ಇಲ್ಲ.

### ಕಾಂಬಿನೇಷನ್ ಹೇಗಿರಬೇಕು?

ಮೊದಲು ಎಮರಾಲ್ಡ್ ಯಾವೆಲ್ಲ ಇತರ ಹರಳುಗಳೊಂದಿಗೆ ಹೊಂದಿಕೊಳ್ಳುತ್ತದೆ ಎಂಬುದನ್ನು ತಿಳಿದುಕೊಂಡಿರಬೇಕು. ಎಮರಾಲ್ಡ್ ಹರಳು ರೂಬಿಯೊಂದಿಗೆ ಚೆನ್ನಾಗಿ ಹೊಂದಿಕೊಳ್ಳುತ್ತದೆ. ಮುತ್ತಿನೊಂದಿಗೆ ವಿನ್ಯಾಸಗೊಳಿಸಿದ್ದು ಸೊಗಸಾಗಿರುತ್ತದೆ. ಅಲ್ಲದೆ ಬಿಳಿ ಹರಳಿನೊಂದಿಗೆ ಹಾಲು, ಸಕ್ಕರೆಯಂತೆ ಹೊಂದಿಕೊಳ್ಳುತ್ತದೆ. ಕೇವಲ ಪಚ್ಚೆ ಬಣ್ಣ ಬೇಡ ಎಂದಾದಲ್ಲಿ ಈ ತರ ಬೇರೆ ಬೇರೆ ಬಣ್ಣದ ಹರಳುಗಳನ್ನು ಸೇರಿಸಿ ಹೊಸ ರೂಪು ಕೊಟ್ಟು ವಿನ್ಯಾಸಗೊಳಿಸಬಹುದು. ಆದರೆ ಪಚ್ಚೆ ಬಣ್ಣ ಎದ್ದು ಕಾಣುವಂತಿರಬೇಕು. ನೆಕ್ಲೇಸ್‌ನಲ್ಲಿ ಆದಷ್ಟು ದೊಡ್ಡ ಗಾತ್ರದ ಹರಳು ಇರಲಿ. ಬಳೆಯಲ್ಲೂ ದೊಡ್ಡ ಹರಳು ಇರಲಿ. ಆಗ ಆರತಕ್ಷತೆ ಕಾರ್ಯಕ್ರಮಗಳಲ್ಲಿ ಅದ್ಭುತವಾಗಿರುತ್ತದೆ. ಸಾಂಪ್ರದಾಯಿಕ ಕಾರ್ಯಕ್ರಮಗಳಲ್ಲಿ ಸಣ್ಣ ಸಣ್ಣ ಹರಳುಗಳಲ್ಲಿ ವಿನ್ಯಾಸಗೊಳಿಸಿದ ಹೂ, ಹಕ್ಕಿ, ಆಕಾರಗಳು ಇರಲಿ. ಒಟ್ಟಿನಲ್ಲಿ ಒಂದು ಚಿತ್ರಣ ಇರಲಿ ಹಾಗೆ ನೋಡಿಕೊಂಡರಾಯಿತು. ಪಚ್ಚೆ ಬಣ್ಣ ಬಾಳಲ್ಲಿ ಸದಾ ಸಂತಸ ತರುವುದರಲ್ಲಿ ಬೇರೆ ಮಾತಿಲ್ಲ.

ಪಚ್ಚೆ ಹರಳಿನಲ್ಲಿ ರೌಂಡ್, ಓವಲ್, ಪಿಯರ್, ಸ್ಕ್ವೇರ್.. ಹೀಗೆ ಹಲವು ಶೇಪ್‌ಗಳು ಇರುತ್ತವೆ. ಪ್ರಾಂಗ್ ಸೆಟ್ಟಿಂಗ್, ಕ್ಲೋಸ್ ಸೆಟ್ಟಿಂಗ್‌ನಲ್ಲಿ ವಿನ್ಯಾಸಗೊಳಿಸಿ ಆಭರಣವನ್ನು ವಿನ್ಯಾಸಗಾರರು ತಯಾರು ಮಾಡಿರುತ್ತಾರೆ. ಚೋಕರ್, ನೆಕ್ಲೇಸ್, ಕಿವಿಯೋಲೆ, ಉಂಗುರ ಹೆಚ್ಚು ಬಳಕೆಯಲ್ಲಿದೆ. ಬಳೆಗಳಿಗೂ ಎಮರಾಲ್ಡ್ ಬಳಸುತ್ತಾರೆ. ಆದರೆ ಲೈಟ್‌ವೈಟ್ ಮಾಡಿದ್ರೆ ಜಾಗರೂಕತೆಯಿಂದ ಕಾಪಾಡಿಕೊಳ್ಳಬೇಕು.

ಪಚ್ಚೆ ಹರಳುಗಳು ಶಾಂತಿ, ಸಮೃದ್ಧಿಯ ಪ್ರತೀಕವೂ ಹೌದು ಎಂಬ ನಂಬಿಕೆ ಹಲವರದ್ದು. ಚಿನ್ನ ಬೆಳ್ಳಿ ಮೇಲೆ ಮುತ್ತು, ಪಚ್ಚೆ, ನೀಲ, ಹವಳಗಳನ್ನು ಕೂರಿಸಿ ಹೊಸ ಪರಿಕಲ್ಪನೆಯೊಂದಿಗೆ ತಯಾರಿಸಿದ ಆಭರಣ ಸಾಂಪ್ರದಾಯಿಕತೆಗೆ ಆಧುನಿಕ ಮೆರುಗು ನೀಡಿದಂತೆ ಕಾಣುತ್ತದೆ. ಕೈಕುಸುರಿಯಿಂದ ಮಾಡಿದ ಒಡವೆಯಲ್ಲಿ ವಿನ್ಯಾಸಗಾರನ ಚಾಕಚಕ್ಯತೆಯ ಛಾಪು ಒತ್ತಿದೆ. ಇಲ್ಲೂ ಮೂಲ ಆಭರಣ ವಿನ್ಯಾಸಕ್ಕೆ ಕೊಂಚವೂ ಧಕ್ಕೆಯಾಗದಂತೆ ತಯಾರಿಸಿದ ವಿನ್ಯಾಸಗಾರನ ಪರಿಶ್ರಮ ಒಡವೆಯನ್ನು ಮತ್ತಷ್ಟು ಆಕರ್ಷಕವಾಗಿಸುವಲ್ಲಿ ಸಫಲವಾಗಿದೆ.